ಸಂಗೀತ ಮತ್ತು ವಿವೇಕಾನಂದರು

ಸ್ವಾಮಿ ಹರ್ಷಾನಂದ

ಸ್ವಾಮಿ ವಿವೇಕಾನಂದರ ಜೀವನದ ಅತ್ಯಂತ ಸಕ್ರಿಯಾತ್ಮಕ ಅಂಶವೆಂದರೆ ಸಂಗೀತ. ಅವರು ಶ್ರೇಷ್ಠ ಸಂಗೀತಜ್ಞ ರಾಗಿದ್ದುದಲ್ಲದೆ, ಸುಮಧುರ ಗಾಯಕರಾಗಿದ್ದರು. ಭಾರತೀಯ ಸಂಸ್ಕೃತಿಯ ಅನುಪಮ ಅಂಗವಾಗಿದ್ದ ಸಂಗೀತದ ಆರಾಧಕರಾಗಿದ್ದ ಸ್ವಾಮೀಜಿಯವರ ಜೀವನದ ಈ ವಿಶಿಷ್ಟ ಅಂಶವನ್ನು ಚೇತೋಹಾರಿಯಾಗಿ ನಮಗೆ ತಿಳಿಸಿಕೊಟ್ಟಿರುವ ಪೂಜ್ಯ ಸ್ವಾಮಿ ಹರ್ಷಾನಂದಜಿ ಮಹಾರಾಜ್ ಅವರು ಬೆಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷರು. ಸಂಸ್ಕೃತ, ಕನ್ನಡ ಮತ್ತು ಇಂಗ್ಲಿಷ್‌ಗಳಲ್ಲಿ ಉದ್ದಾಮ ಪಂಡಿತರಾಗಿರುವ ಇವರು ಹಲವಾರು ಗ್ರಂಥಗಳನ್ನು ರಚಿಸಿದ್ದಾರೆ. ಸ್ವತಃ ಉತ್ತಮ ಮಟ್ಟದ ಸಂಗೀತಕಾರರೂ ಹೌದು.

"ಸಂಗೀತವು ಮಾನವಕುಲದ ವಿಶ್ವವ್ಯಾಪಿ ಪರಿಭಾಷೆ" ಎಂಬುದು ಲಾಂಗ್‌ಫೆಲೊ ಕವಿಯ ಉದ್ಗಾರ. ಅದು ದೇವದೂತರ ವಾಕ್ಕು ಎಂದು ಹೇಳಲಾಗಿದೆ. "ಸಂಗೀತವು ಅನಾಗರಿಕ ನರಪಶುವನ್ನು ಸಹ ಮೋಹಗೊಳಿಸುವ ಸೊಬಗನ್ನು ಹೊಂದಿದೆ" ಎಂಬುದು ಜೇಮ್ಸ್ ಬ್ರಾಮ್‌ಸ್ಟನ್‌ನ ಅಭಿಪ್ರಾಯ. ಇನ್ನು ಷೇಕ್ಸ್‌ಪಿಯರ್ ಮಹಾಶಯನು ತನ್ನ **ಮರ್ಚೆಂಟ್ ಆಫ್ ವೆನಿಸ್** (*Merchant of Venice*) ನಾಟಕದಲ್ಲಿ, "ಆಂತರ್ಯದಲ್ಲಿ ಗಾನರಸದ ಅಭಿರುಚಿ ಇರದ, ಮಧು ಮಧುರವಾದ ಗಾನದ ಅಲೆಗಳಿಂದಲೂ ಮನ ಚಲಿಸದವನಾದ ಮಾನವನು ದೇಶದ್ರೋಹಕ್ಕೆ, ಸ್ವಹಿತವನ್ನೇ ಸಾಧಿಸಿಕೊಳ್ಳುವ ತಂತ್ರಕ್ಕೆ, ಲೂಟಿ ಸುಲಿಗೆ ಮಾಡುವ ಹೀನಕಾರ್ಯಕ್ಕೆ ಯೋಗ್ಯನು" ಎಂದು ಹೇಳಿದ್ದಾನೆ. "ಎಲ್ಲಾ ಉಪದೇಶಗಳಿಗಿಂತಲೂ ಒಂದು ಗಾನವು ಹೆಚ್ಚುಕಾಲ ಸ್ಮರಣೆಯಲ್ಲಿರುವುದು" ಎಂಬುದು ಹೆನ್ರಿ ಗೈಲ್ಸ್‌ನ ಮಾತು. ಮಾನವಕುಲದ ಜೀವನದಲ್ಲಿ ಸಂಗೀತದ ಹಿರಿಮೆಯನ್ನು ಸಾರಲು ಈ ಮೇಧಾವಿಗಳ ಮಾತುಗಳೇ ಸಾಕು.

ಇತಿಹಾಸಪೂರ್ವದ ಭಾರತದ ಹೃದಯದಲ್ಲಿ ಸಂಗೀತದ ಉಗಮವು ಮರೆಮಾಚಲ್ಪಟ್ಟಿದೆ. ಋಗ್ವೇದದ ಮತ್ತು ಸಾಮವೇದದ ಕಾಲದ ಹಿಂದಿನವರೆಗೂ ಅದರ ಮೂಲವನ್ನು ಅರಸಬಹುದು; ಅಂದರೆ ಕ್ರಿಪೂ ೪೫೦೦ರಿಂದ ಕ್ರಿಪೂ. ೨೦೦೦ದ ಕಾಲಮಾನದಷ್ಟು ಹಿಂದಕ್ಕೆ ಹೋಗಬಹುದು. ಸಂಗೀತವು ಉಳಿದ ದೇಶಗಳಲ್ಲಿ ಇನ್ನೂ ವಿಕಸನ ಹಂತದ ಪ್ರಾರಂಭಾವಸ್ಥೆಯಲ್ಲಿದ್ದಾಗ, ಅಂದರೆ ಜಾನಪದ ಗೀತೆಗಳಲ್ಲಿಯೇ ಉಳಿದಿದ್ದಾಗ, ಭಾರತೀಯ ಸಂಗೀತವು ಒಂದು ವ್ಯವಸ್ಥಿತ ಶಾಸ್ತ್ರವಾಗಿ ಶ್ರುತಿ, ಸ್ವರ, ರಾಗ, ಲಯ ಮತ್ತು ತಾಳದ ಪರಿಕಲ್ಪನೆಗಳೊಂದಿಗೆ ಎತ್ತರಕ್ಕೆ ಬೆಳೆದಿತ್ತು. **ನಾರದ ಪರಿವ್ರಾಜಕ** ಮತ್ತು **ಗರ್ಭ** ಮುಂತಾದ ಉಪನಿಷತ್ತುಗಳಲ್ಲಿ ಸಂಗೀತದಲ್ಲಿ ಸಪ್ತಸ್ವರಗಳ ಪದ್ಧತಿ ಇದ್ದಿತೆಂಬುದಕ್ಕೆ ಸ್ಪಷ್ಟವಾದ ಉಲ್ಲೇಖಗಳಿವೆ.

ಪ್ರಾಚೀನ ಭಾರತದ ಇತರ ಕಲೆ ಮತ್ತು ವಿಜ್ಞಾನ ಶಾಸ್ತ್ರಗಳಂತೆ, ಸಂಗೀತ ಮತ್ತು ನಾಟ್ಯಗಳು (ಪ್ರಾಥಮಿಕ ಹಂತದಲ್ಲಿ ಇವು ಒಂದೇ ಕಲೆಯ ಎರಡು ಭಾಗಗಳಾಗಿದ್ದವು) ಸಹ ಧರ್ಮವನ್ನೇ ಆಧಾರವಾಗಿ ಹೊಂದಿದ್ದವು. ಅವು ಧರ್ಮವನ್ನೇ ಮುಖ್ಯಲಕ್ಷಣವನ್ನಾಗಿ ಹೊಂದಿದ್ದು, ಅವನ್ನು

ಭಗವಂತನಲ್ಲಿ ಭಕ್ತಿಗಾಗಿ ಮತ್ತು ಅವನ ಸಾಕ್ಷಾತ್ಕಾರಕ್ಕಾಗಿ ಒಂದು ಸಾಧನವನ್ನಾಗಿ ಬಳಸುತ್ತಿದ್ದರು. 'ನಾದೋಪಾಸನ' (ಸಂಗೀತದ ಮೂಲಕ ಧ್ಯಾನ) ಎಂದು ಪ್ರಚಲಿತವಾಗಿದ್ದ ಅದನ್ನು, ಧಾರ್ಮಿಕ ಜೀವನದಲ್ಲಿ ವಿಶೇಷ ಫಲಕಾರಿಯಾದ ಉಪಾಸನೆಯೆಂದು ಪರಿಗಣಿಸುತ್ತಿದ್ದರು. ಪ್ರಾಚೀನ ಋಷಿಗಳಾದ ನಾರದ, ತುಂಬುರರು, ತುಲಸೀದಾಸರು, ಮೀರಾಬಾಯಿ, ಕಬೀರ್, ನಾನಕ್, ರಾಮಪ್ರಸಾದ್, ಕಮಲಾಕಾಂತ, ತುಕಾರಾಮ್, ಪುರಂದರದಾಸರು ಮತ್ತು ತ್ಯಾಗರಾಜರೇ ಮೊದಲಾದ ಐತಿಹಾಸಿಕ ವ್ಯಕ್ತಿಗಳು ನಾದೋಪಾಸನೆಯಿಂದ ಅಪೇಕ್ಷಿತ ಫಲವನ್ನು ಪಡೆದ ಉಜ್ವಲ ರತ್ನಗಳು. ಈ ಶ್ರೇಷ್ಠಸಂತರು ಮತ್ತು ಭಗವಂತನ ಸೇವಕರು ಸಂಗೀತ ಕಲೆಯನ್ನು ಭಗವಂತನ ಸಾಕ್ಷಾತ್ಕಾರಕ್ಕಾಗಿ ಒಂದು ಸಾಧನವಾಗಿ ಉಪಯೋಗಿಸಿಕೊಂಡಿದ್ದರಲ್ಲದೆ, ನಮ್ಮ ಧಾರ್ಮಿಕ ಇತಿಹಾಸದ ಕಠಿಣ ಪರಿಸ್ಥಿತಿಯಲ್ಲಿ ಜನಸಾಮಾನ್ಯರಲ್ಲಿ ನೈಜಧರ್ಮದ ಪ್ರಸಾರಕ್ಕಾಗಿಯೂ ಬಳಸಿಕೊಂಡರು. ಹೀಗೆ ಭಕ್ತಿಯೇ ಪ್ರಧಾನ ಗುಣವನ್ನಾಗಿ ಉಳ್ಳ ಭಾರತೀಯ ಸಂಗೀತವನ್ನು 'ಭಜನೆಗಳು' ಎಂದು ಸಮುಚಿತವಾಗಿ ಕರೆಯಬಹುದಾಗಿದೆ.

ಒಂದು ಭಜನೆಯು ಪರಿಪೂರ್ಣವಾಗಬೇಕಾದರೆ ಅದು ಕೆಲವು ಅಗತ್ಯ ನಿಯಮಗಳನ್ನು ಹೊಂದಿರಲೇಬೇಕು. ಅವುಗಳನ್ನು ಹೀಗೆ ಪಟ್ಟಿ ಮಾಡಬಹುದು: ಮಧುರವಾದ ಧ್ವನಿ, ಪಕ್ಕವಾದ್ಯಗಳು, ಸಂಗೀತಶಾಸ್ತ್ರದ ನಿಯಮಗಳ ಪರಿಜ್ಞಾನ, ಉತ್ತಮ ಮಟ್ಟದ ಗೀತ ರಚನೆ, ಸ್ಪಷ್ಟ ಉಚ್ಚಾರ, ಮತ್ತು ಭಕ್ತಿ. ಸುಶ್ರಾವ್ಯ ಕಂಠವೇ ಭಜನೆಯ ಜೀವಾಳ. ಅದಿಲ್ಲದಿದ್ದರೆ ಭಜನೆಯು ಭಜನೆಯೇ ಅಲ್ಲ. ಅದು ಗಣಿತಶಾಸ್ತ್ರದ ಸಂಖ್ಯೆ '೧' ರಂತೆ. ತದನಂತರ ಶೂನ್ಯಗಳು (ಸೊನ್ನೆ) ಹಿಂಬಾಲಿಸುವುವು. ಈ ಶೂನ್ಯಗಳು ಅರ್ಥ ಪಡೆಯಲು ಮತ್ತು ಸಂಖ್ಯೆಯ ಬೆಲೆ ವೃದ್ಧಿಯಾಗಲು ಪ್ರಾರಂಭದಲ್ಲಿಯೇ ಸಂಖ್ಯೆ '೧' ಇರಬೇಕು. ಇಲ್ಲದಿದ್ದರೆ ಅವು ಕೇವಲ ಶೂನ್ಯಗಳು ಮಾತ್ರವೇ. ಅಂತೆಯೇ ಪಕ್ಕವಾದ್ಯಗಳ ಸಹಕಾರ, ಸಂಗೀತದ ತಂತ್ರ ಇತ್ಯಾದಿಗಳು ಭಜನೆಯ ಸೊಬಗನ್ನು ಹೆಚ್ಚಿಸಬೇಕಾದರೆ, ಸುಶ್ರಾವ್ಯ ಕಂಠವಿದ್ದರೆ ಮಾತ್ರ ಸಾಧ್ಯ.

ಗಾಯಕನ ಕಂಠವು ಮಧುರವಾಗಿ, ಹಿತಕರವಾಗಿ ಹಾಗೂ ಪಕ್ಕವಾದ್ಯಗಳಾದ ತಂಬೂರಿ, ತಬಲ, ಸರೋದ್, ಸಿತಾರ್, ವೀಣಾ, ಪಿಟೀಲು ಇತ್ಯಾದಿಗಳಿಗೆ ಶ್ರುತಿಬದ್ಧವಾಗಿ ಹೊಂದಿಕೊಂಡಿದ್ದರೆ ಅದು ನಿಸ್ಸಂಶಯವಾಗಿ ಒಟ್ಟು ಪರಿಣಾಮವನ್ನು ಹೆಚ್ಚಿಸುತ್ತದೆ. ಸಂಗೀತಶಾಸ್ತ್ರದ ಜ್ಞಾನ ಮತ್ತು ತಂತ್ರಗಾರಿಕೆಗಳು ಸೂಕ್ತವಾಗಿ ಮಿಳಿತಗೊಂಡರೆ ಅವು ಇಡೀ ಗೋಷ್ಠಿಗೆ ಮೆರುಗನ್ನು ನೀಡುತ್ತವೆ.

ಗಾಯಕನು ಹಾಡುತ್ತಿರುವ ಕೃತಿಯು ಕಾವ್ಯಮಯವಾಗಿಲ್ಲದೆ ಇದ್ದರೆ ಮತ್ತು ಸೂಕ್ಷ್ಮ ಭಾವನೆಗಳಿಂದ ಶ್ರೀಮಂತವಾಗಿಲ್ಲದೆ ಇದ್ದರೆ ಈ ಎಲ್ಲ ಮೇಳಗಳು ನಿರರ್ಥಕ. ಒಂದು ಒಳ್ಳೆಯ ಕೃತಿಯನ್ನು ಭಾವಪೂರಿತವಾಗಿ, ಶುದ್ಧ ನಿಚ್ಚಳ ಕಂಠದಲ್ಲಿ ಹಾಡಿ, ಶ್ರುತಿಯಲ್ಲಿ ಅಡಕವಾಗಿರುವ ನೈಜ ಅರ್ಥ ಮತ್ತು ಭಾವನೆಗಳನ್ನು ಹೊರಹೊಮ್ಮಿಸಿದರೆ ಅದರ ಒಟ್ಟು ಪರಿಣಾಮ ಅದ್ಭುತವಾಗಿರುತ್ತದೆ.

ಸ್ವಾಮಿ ವಿವೇಕಾನಂದರಿಗೆ, ಸಂಗೀತಕ್ಕೆ ಮೂಲಭೂತವಾದ ಜ್ಞಾನವು ಪ್ರಕೃತಿದತ್ತವಾಗಿತ್ತು. ಈ ಕೊಡುಗೆಯನ್ನು ಸ್ವಾಮಿ ವಿವೇಕಾನಂದರು ತಮ್ಮ ಆಳವಾದ ಸಂಗೀತಜ್ಞಾನದಿಂದ, ಕೌಶಲ್ಯದಿಂದ ಮತ್ತು ಸತತ ಅಭ್ಯಾಸದಿಂದ ಮತ್ತಷ್ಟು ಸುಸಂಸ್ಕೃತ ಗೊಳಿಸಿಕೊಂಡಿದ್ದರು.

ಅವರಿಗೆ ಶ್ರೀಮಂತವಾದ, ಜೀವತುಂಬಿದ ಅತಿ ಮಧುರ ವಾದ – ಚೀನೀಯರ ಗಂಟೆಯ ಸುಮಧುರ ನಿನಾದಕ್ಕೆ ತತ್ಸಮವಾದ – ಧ್ವನಿಯು ಅವರ ತಂದೆತಾಯಿಗಳಿಂದ ಬಳುವಳಿಯಾಗಿ ಬಂದಿತ್ತು.

ಈ ಅನುಪಮವಾದ ಕಂಠಶ್ರೀಗೆ ಶ್ರೀರಾಮಕೃಷ್ಣರು ಮನಸೋತು ನರೇಂದ್ರನಾಥರನ್ನು ಆಗಾಗ್ಗೆ ಹಾಡಲು ಪ್ರಚೋದಿಸುತ್ತಿದ್ದರು. ನರೇಂದ್ರರು ದಕ್ಷಿಣೇಶ್ವರದಲ್ಲಿ ಶ್ರೀರಾಮಕೃಷ್ಣರ ಸಮ್ಮುಖದಲ್ಲಿ ಹಾಡಿದ ಮೊಟ್ಟಮೊದಲನೆಯ ಕೃತಿಯೇ ಶ್ರೀರಾಮಕೃಷ್ಣರನ್ನು ಆಳವಾದ ಸಮಾಧಿಗೆ ಏರಿಸಿತು. ಮೌಂಟ್ ಅಬುವಿನಲ್ಲಿ ನಡೆದ ಈ ಮುಂದಿನ ಘಟನೆಯು ಅವರ ಕಂಠಮಾಧುರ್ಯಕ್ಕೆ ಬೆಳಕು ಚೆಲ್ಲುತ್ತದೆ:

"ಸ್ವಾಮಿ ವಿವೇಕಾನಂದರು ಬಹುಬೇಗನೆ ಬಹುಸಂಖ್ಯೆಯ ಶಿಷ್ಯರನ್ನು ಸಂಪಾದಿಸಿದರು. ಸಂಜೆಯ ವೇಳೆ ಈ ಶಿಷ್ಯರೊಡನೆ ವಾಯುವಿಹಾರಕ್ಕೆ ಹೋಗುತ್ತಿದ್ದರು. ಒಂದು ದಿನ ಅವರು ಆ ಗಿರಿಧಾಮದ ಅತ್ಯಂತ ಮನೋಹರವಾದ ಪ್ರಕೃತಿಸೌಂದರ್ಯವನ್ನು ತೋರಿಸುವ ಬೈಲಿ ನಡೆ ಪಥದಲ್ಲಿ, ಶಿಷ್ಯರೊಡನೆ ವಿಹಾರ ನಡೆಸುತ್ತಿದ್ದರು. ಆ ಸ್ಥಳದ ಕೆಳಗೆ ಮೌಂಟ್‌ಅಬುವಿನ ಸರೋವರವು ಹರಡಿಕೊಂಡಿತ್ತು. ಸ್ವಾಮೀಜಿ ತಮ್ಮ ಶಿಷ್ಯರೊಡನೆ ನಡೆದಾಟವನ್ನು ನಿಲ್ಲಿಸಿ, ಅಲ್ಲಿಯೇ ಶಿಲೆಗಳ ನಡುವೆ ಕುಳಿತರು. ನಂತರ ಅವರು ಹಾಡಲು ಉಪಕ್ರಮಿಸಿದರು. ಅವರ ಗಾಯನವು ತಾಸುಗಟ್ಟಲೆ ಮುಂದುವರೆಯಿತು. ಕೆಲವು ಯೂರೋಪಿಯನ್ನರು ಸಹ ಸಂಜೆಯ ವಾಯುವಿಹಾರಕ್ಕೆ ಬಂದಿದ್ದರು. ಅವರು ಸ್ವಾಮೀಜಿಯವರ ಮಧುರವಾದ ಗಾನವನ್ನು ಕೇಳಿ ಆಕರ್ಷಿತರಾಗಿ ಗಾಯಕನ ದರ್ಶನಕ್ಕಾಗಿ ಗಂಟೆಗಟ್ಟಲೆ ಕಾಯುತ್ತಿದ್ದರು. ಕಡೆಗೊಮ್ಮೆ ಸ್ವಾಮೀಜಿ ಕೆಳಗಿಳಿದುಬಂದರು. ಆ ಎಲ್ಲ ಯೂರೋಪಿಯನ್ನರು ಸ್ವಾಮೀಜಿಯನ್ನು ಅವರ ಮಧುರ ಕಂಠಕ್ಕಾಗಿ ಹಾಗೂ ಭಾವಪರವಶವಾದ ಗಾನಕ್ಕಾಗಿ ಅಭಿನಂದಿಸಿದರು."

ಸ್ವಾಮೀಜಿಯವರು ವಿದ್ಯಾರ್ಥಿಯಾಗಿದ್ದಾಗಲೇ ಸಂಗೀತದಲ್ಲಿ ಪ್ರಾವೀಣ್ಯವನ್ನು ಪಡೆದಿದ್ದರು. ಅವರು ಶ್ರೇಷ್ಠ ಸಂಗೀತಗಾರರಾಗಿದ್ದ ಅಹಮದ್ ಖಾನ್ ಮತ್ತು ಬೇನಿ ಗುಪ್ತರವರ ಶಿಷ್ಯರಾಗಿ ಹಾಡುಗಾರಿಕೆಯನ್ನೂ, ವಾದ್ಯಸಂಗೀತವನ್ನೂ ಕ್ರಮಬದ್ಧವಾಗಿ

ಸುಮಾರು ಐದು ವರ್ಷಗಳು ಕಲಿತು ಅಭ್ಯಾಸ ಮಾಡಿದ್ದರು. ಅವರು ಗಾಯನದಲ್ಲಿ ಹೆಚ್ಚು ಪ್ರವೀಣರಾಗಿದ್ದರೂ, ಅನೇಕ ವಾದ್ಯಗಳನ್ನೂ ನುಡಿಸಬಲ್ಲವರಾಗಿದ್ದರು. ಭಜನೆಗಳನ್ನು ಹಾಡುವುದರಲ್ಲಿ ನಿಪುಣರಾಗಿದ್ದರು. ಅವರಿಗೆ ಬಂಗಾಳಿ, ಹಿಂದಿ, ಉರ್ದು, ಪರ್ಷಿಯನ್ ಮತ್ತು ಸಂಸ್ಕೃತ ಭಾಷೆಗಳ ಅನೇಕ ಕೃತಿಗಳು ಕಂಠಸ್ಥವಾಗಿದ್ದವು. ಅವರ ಗೆಳೆಯನೊಬ್ಬನು ಬಂಗಾಳಿ ಭಾಷೆಯ ಹಾಡುಗಳನ್ನು ಸಂಪಾದಿಸಿ ಪ್ರಕಟಿಸಲು ಉದ್ಯುಕ್ತನಾದಾಗ, ಆ ಪುಸ್ತಕಕ್ಕೆ ವಿಸ್ತಾರವಾದ ಮುನ್ನುಡಿಯನ್ನು ಬರೆದುಕೊಟ್ಟು, ಅದರಲ್ಲಿ ಭಾರತೀಯ ಸಂಗೀತದ ಜ್ಞಾನ ಮತ್ತು ತಂತ್ರಗಳನ್ನು ವಿವರವಾಗಿ ಚರ್ಚಿಸಿದ್ದಾರೆ. ಈ ವಿದ್ವತ್‌ಪೂರ್ಣ ಮುನ್ನುಡಿಯಲ್ಲಿ ಸ್ವಾಮೀಜಿಯವರ ಸಂಗೀತ ಕ್ಷೇತ್ರದಲ್ಲಿನ ಅಪಾರ ವಿದ್ವತ್ತಿನ ಸೂಚನೆ ದೊರಕುತ್ತದೆ.

ಭಾಗಲ್ಪುರದ ಶ್ರೀ ಮನ್ಮಥನಾಥ ಚೌಧುರಿಯವರ ಗೃಹದಲ್ಲಿ ನಡೆದ ಈ ಕೆಳಕಂಡ ಘಟನೆಯು ಸ್ವಾಮೀಜಿಯವರಲ್ಲಿದ್ದ ಪರಿಪೂರ್ಣ ಗಾಯಕನನ್ನು ಪರಿಚಯಿಸುತ್ತದೆ: "೧೮೯೦ನೇ ಇಸವಿ ಆಗಸ್ಟ್ ತಿಂಗಳ ಒಂದು ದಿನ ಉಷಃಕಾಲದಲ್ಲಿ ಸ್ವಾಮಿ ವಿವೇಕಾನಂದರು ಸ್ವಾಮಿ ಅಖಂಡಾನಂದರ ಜೊತೆಗೂಡಿ ಅನಿರೀಕ್ಷಿತವಾಗಿ ನಮ್ಮ ಮನೆಗೆ ಬಂದರು. ಅವರಿಬ್ಬರೂ ಸಾಮಾನ್ಯ ಸಾಧುಗಳೆಂದೆಣಿಸಿ ನಾನು ಅವರ ಬಗ್ಗೆ ಹೆಚ್ಚು ಗಮನ ಕೊಡಲಿಲ್ಲ... ಒಮ್ಮೆ ಸ್ವಾಮೀಜಿ ತಮ್ಮಲ್ಲಿಯೇ ಒಂದು ರಾಗವನ್ನು ಗುನುಗಿಕೊಳ್ಳುತ್ತಿರುವುದನ್ನು ಗಮನಿಸಿದೆ. ಅವರು ಹಾಡಬಲ್ಲರೇ ಎಂದು ಅವರನ್ನು ಕೇಳಿದೆ. ಸ್ವಾಮೀಜಿ 'ಎಲ್ಲೋ ಸ್ವಲ್ಪ' ಎಂದುತ್ತರಿಸಿದರು. ನಮ್ಮೆಲ್ಲರ ಬಲವಂತಕ್ಕೆ ಸ್ವಾಮೀಜಿ ಹಾಡಲು ತೊಡಗಿದರು. ವಿದ್ಯೆಯ ಜೊತೆಗೆ ಸಂಗೀತದಲ್ಲೂ ಅವರ ಅದ್ಭುತ ಪಾಂಡಿತ್ಯವನ್ನು ಕಂಡು ಬೆರಗಾದೆ. ಮರುದಿನ ಅವರು ಹಾಡಲು ಒಪ್ಪಿಗೆ ಕೊಟ್ಟರೆ ಕೆಲವು ಗಾಯಕರನ್ನು ಮತ್ತು ಸಂಗೀತಗಾರರನ್ನು ಆಮಂತ್ರಿಸಬಹುದೇ ಎಂದು ಕೇಳಿದೆ. ಅವರು ಸಮ್ಮತಿ ಸೂಚಿಸಿದರು. ನಾನು ಅನೇಕ ಸಂಗೀತಗಾರರನ್ನು – ಅವರಲ್ಲಿ ಹಲವು ಉಸ್ತಾದರೂ ಇದ್ದರು – ಆಮಂತ್ರಿಸಿದೆ. ಕಛೇರಿಯು ೯ ಅಥವಾ ೧೦ ಗಂಟೆಗೆ ಮುಗಿಯಬಹುದೆಂದು ಯೋಚಿಸಿ ನಾನು ಅತಿಥಿಗಳಿಗೆ ರಾತ್ರಿಯ ಭೋಜನ ವ್ಯವಸ್ಥೆಯನ್ನು ಮಾಡಿರಲಿಲ್ಲ. ಸ್ವಾಮೀಜಿಯವರು ಎಡೆಬಿಡದೆ ರಾತ್ರಿ ಎರಡು ಅಥವಾ ಮೂರು ಗಂಟೆಯವರೆಗೆ ಹಾಡಿದರು. ಎಲ್ಲರೂ ಮಂತ್ರಮುಗ್ಧರಾಗಿ ಹಸಿವು ಬಾಯಾರಿಕೆಗಳ ಪರಿವೆಯೇ ಇಲ್ಲದೆ, ಕಾಲದ ಅರಿವೂ ಇಲ್ಲದೆ ಕುಳಿತಿದ್ದರು! ಯಾರೂ ಕುಳಿತ ಜಾಗದಿಂದ ಅಲ್ಲಾಡದೆ, ಮನೆಗೆ ಹೋಗಬೇಕೆಂಬ ಯೋಚನೆಯೂ ಇಲ್ಲದೆ ಕುಳಿತಿದ್ದರು. ಕೈಲಾಶ್‌ಬಾಬು ಸ್ವಾಮೀಜಿಯವರಿಗೆ ಪಕ್ಕವಾದ್ಯ ನುಡಿಸುತ್ತಿದ್ದರು. ಕಡೆಗೆ ಅವರ ಬೆರಳುಗಳು ಮರಗಟ್ಟಿದಂತಾಗಿ ಎಲ್ಲ ಸಂವೇದನೆಯನ್ನೂ ಕಳೆದುಕೊಂಡು ವಾದ್ಯವನ್ನು ಮುಂದೆ ನುಡಿಸಲು ಆಗದೆ ಸುಮ್ಮನೆ ಕುಳಿತುಬಿಟ್ಟರು. ಸ್ವಾಮೀಜಿಯವರ ಈ ಅತಿಮಾನುಷಶಕ್ತಿಯನ್ನು ನಾನು ಹಿಂದೆ ಯಾರೊಬ್ಬರಲ್ಲೂ ಕಂಡಿರಲಿಲ್ಲ; ಮುಂದೆ ನೋಡುವ ನಿರೀಕ್ಷಣೆಯಲ್ಲೂ ಇರಲಿಲ್ಲ. ಮರುದಿನ ಸಂಜೆ ಹಿಂದಿನ ರಾತ್ರಿಯ ಅತಿಥಿಗಳು ಮತ್ತು ಆಮಂತ್ರಣವಿಲ್ಲದ ಅನೇಕರು ಮನೆಯಲ್ಲಿ ನೆರೆದಿದ್ದರು. ವಾದ್ಯಗಾರನೂ ಬಂದಿದ್ದ. ಆದರೆ ಸ್ವಾಮೀಜಿ ಆ ದಿನ ಹಾಡಲೇ ಇಲ್ಲ. ಎಲ್ಲರಿಗೂ ಅತ್ಯಂತ ನಿರಾಸೆಯಾಯಿತು."

ಈ ಲೇಖನವು ಸಂಗೀತದ ಬಗ್ಗೆ ಸ್ವಾಮೀಜಿಯವರ ದೃಷ್ಟಿಕೋನವನ್ನು ತಿಳಿಸದೆ ಮುಗಿಯಲಾರದೆಂದೆನಿಸುತ್ತದೆ. ಸ್ವಾಮೀಜಿ ತಮ್ಮ 'ಭಕ್ತಿಯೋಗದ ಉಪನ್ಯಾಸ'ಗಳಲ್ಲಿ, ಸಂಗೀತವು ಮಾನವನ ಮನಸ್ಸಿನ ಮೇಲೆ ಪ್ರಚಂಡ ಪರಿಣಾಮವನ್ನು ಬೀರುತ್ತದೆ ಎಂದು ಘೋಷಿಸಿದ್ದಾರೆ:

"ಸಂಗೀತವು ಮಾನವ ಮನಸ್ಸಿನ ಮೇಲೆ ಅದ್ಭುತ ಶಕ್ತಿಯನ್ನು ಬೀರುತ್ತದೆ. ಅದು ಏಕಾಗ್ರತೆಯನ್ನು ಕ್ಷಣಕಾಲದಲ್ಲಿ ತರಬಲ್ಲದು. ದಡ್ಡರು, ಅಜ್ಞಾನಿಗಳು, ದೀನರು, ಪಶುಸಮಾನ ಮಾನವರು – ಇವರಲ್ಲಿ ಯಾರೊಬ್ಬರೂ ಇತರ ಸಮಯದಲ್ಲಿ ತಮ್ಮ ಮನಸ್ಸನ್ನು ಕ್ಷಣಕಾಲವೂ ಹತೋಟಿಯಲ್ಲಿ ಇಡಲಾರರೋ ಅವರು, ರಸಭರಿತ ಗಾನವನ್ನು ಕೇಳಿದ ಮರುಕ್ಷಣವೇ ಅದರಿಂದ ಆಕರ್ಷಿತರಾಗಿ ಏಕಾಗ್ರ ಮನಸ್ಸುಳ್ಳವರಾಗುವರು. ಪ್ರಾಣಿಗಳೂ ಸಹ ಸಂಗೀತದಿಂದ ಪರವಶವಾಗುವುವು."

'ರಾಮಾಯಣ'ವನ್ನು ಕುರಿತು ಕ್ಯಾಲಿಫೋರ್ನಿಯಾದಲ್ಲಿ ಉಪನ್ಯಾಸ ನೀಡುತ್ತಿದ್ದಾಗ, ಸ್ವಾಮೀಜಿ, ಭಾರತದಲ್ಲಿ ಸಂಗೀತ ಮತ್ತು ನಾಟ್ಯಗಳನ್ನು ಸಹ ಧರ್ಮವೆಂದೇ ಜನ ಪರಿಭಾವಿಸಿದ್ದಾರೆ ಎಂದು ಹೇಳಿದ್ದಾರೆ.

"ಭಾರತದಲ್ಲಿ ನಾಟಕವು ಬಹಳ ಪವಿತ್ರ ಕಲೆಯಾಗಿತ್ತು. ನಾಟಕ ಮತ್ತು ಸಂಗೀತವನ್ನು ಧರ್ಮವೆಂದೇ ಜನ ತಿಳಿದಿದ್ದಾರೆ. ಮನತುಂಬಿ ಹಾಡುವ ಯಾವುದೇ ಒಂದು ಹಾಡಿನಿಂದ ಮುಕ್ತಿಯನ್ನು ಪಡೆಯಬಹುದು.

"ಧ್ಯಾನದಿಂದ ತಲುಪುವ ಗುರಿಯನ್ನೇ ಸಂಗೀತವು ತಲುಪಿಸುತ್ತದೆ ಎಂದು ಸರ್ವರ ಅಭಿಪ್ರಾಯ."

ಸ್ವಾಮೀಜಿಯವರು ಅಮೆರಿಕದ ಮಹಿಳೆಯೊಬ್ಬರಿಗೆ ಬರೆದ ಪತ್ರದಲ್ಲಿ ಗಾನವನ್ನು ಪೂಜೆಗೆ ಹೋಲಿಸುತ್ತಾರೆ: "ಸಂಗೀತವು ಕಲೆಗಳಲ್ಲಿ ಅತ್ಯಂತ ಉನ್ನತ ಕಲೆ. ಅದನ್ನು ಅರಿತವರಿಗೆ ಅದೇ ಉತ್ತಮ ಪೂಜೆ."

ಸ್ವಾಮೀಜಿ ತಮ್ಮ ಉಪನ್ಯಾಸದ ತರಗತಿಯೊಂದರಲ್ಲಿ ಪರಿಪೂರ್ಣ ಸಂಗೀತದ ರಹಸ್ಯವನ್ನು ಹೀಗೆ ವಿವರಿಸುತ್ತಾರೆ: "ಧ್ರುಪದ್ ಮತ್ತು ಖಿಯಾಲ್‌ಗಳಲ್ಲಿ ವಿಶೇಷ ಜ್ಞಾನವಿದೆ. ಆದರೆ ಕೀರ್ತನೆಗಳಲ್ಲಿ ನಿಜವಾದ ಸಂಗೀತವಿದೆ; ಏಕೆಂದರೆ ಅದರಲ್ಲಿ ಭಾವವಿದೆ. ಭಾವವೇ ಆತ್ಮ; ಭಾವವೇ ಎಲ್ಲದರ ರಹಸ್ಯ. ಧ್ರುಪದ್ ಮುಂತಾದ್ದರಲ್ಲಿ ಇರುವ ಜ್ಞಾನವನ್ನು ಕೀರ್ತನೆಗೆ ಜೋಡಿಸಿದರೆ. ಆಗ ಪರಿಪೂರ್ಣ ಸಂಗೀತ ಅರಳುತ್ತದೆ."

ಪಾಶ್ಚಿಮಾತ್ಯ ಸಂಗೀತದಲ್ಲಿ ತರಬೇತಿ ಇಲ್ಲದ ಭಾರತೀಯರಿಗೆ ಅದು 'ಊಳಿಡುವ ನರಿಗಳ ಕೂಗಿನಂತಿರುತ್ತದೆ.' ಪಾಶ್ಚಿಮಾತ್ಯ ದೇಶಗಳಿಗೆ ಭೇಟಿ ನೀಡುವ ಮುನ್ನ ಸ್ವಾಮೀಜಿಯವರಿಗೂ ಇದೇ ಅಭಿಪ್ರಾಯವಿತ್ತು. ಅಲ್ಲಿಗೆ ಹೋದಮೇಲೆ ಅವರು ಆಸಕ್ತಿ ವಹಿಸಿ ಆ ಸಂಗೀತವನ್ನು ಕೇಳಲಾರಂಭಿಸಿದರು. ಅದರ ಸೂಕ್ಷ್ಮತೆಗಳನ್ನು ಗಮನವಿಟ್ಟು ಅಧ್ಯಯನ ಮಾಡತೊಡಗಿದರು. ಇದರಿಂದಾಗಿ ಅದರಲ್ಲಿ ಅವರಿಗೆ ಒಲವುಂಟಾಯಿತು. ಆ ಸಂಗೀತದಲ್ಲಿನ ಸಾಮರಸ್ಯದ ಪರಿಪೂರ್ಣತೆಯನ್ನು ಕಂಡು ಮೆಚ್ಚುಗೆಯಾಯಿತು. ಅವರ ಅಭಿಪ್ರಾಯದಂತೆ ಭಾರತೀಯ ಸಂಗೀತದಲ್ಲಿ ಈ ಸಾಮರಸ್ಯದ ಕೊರತೆಯಿದೆ.

ಸ್ವಾಮೀಜಿಯವರ ನಿಖರವಾದ ದೃಷ್ಟಿಯಲ್ಲಿ ನೈಜ ಭಾರತೀಯ ಸಂಗೀತವು 'ಧ್ರುಪದ್' ಮತ್ತು 'ಕೀರ್ತನೆ'ಗಳಲ್ಲಿ ಅಡಗಿದೆ. ಇಸ್ಲಾಂ ಸಂಸ್ಕೃತಿಯ ಪ್ರಭಾವ ಬೀಳುವುದಕ್ಕೆ ಮುನ್ನ, ಈ ಎರಡೂ ಕಾಲಕಾಲಕ್ಕೆ ಸುಧಾರಣೆ ಮತ್ತು ಬೆಳವಣಿಗೆಗಳನ್ನು ಕಂಡು ಸರಿಯಾದ ಪಥದಲ್ಲಿ ಸಾಗುತ್ತಿದ್ದುವು. ಇಸ್ಲಾಂ ಸಂಸ್ಕೃತಿಯ ಪ್ರಭಾವದಿಂದಾಗಿ ಅವು ವಿರೂಪಗೊಂಡು ಸ್ಥಂತಿಕೆಯನ್ನು ಕಳೆದುಕೊಂಡವು. ಈ ಅಭಿಪ್ರಾಯವನ್ನು ಸ್ವಾಮೀಜಿ ಪದೇಪದೇ ಹೇಳುತ್ತಿದ್ದರು.

ಸ್ವಾಮಿ ವಿವೇಕಾನಂದರು ಒಬ್ಬ ಕವಿಯೂ ಆಗಿದ್ದರು. ಅವರು ಸಂಸ್ಕೃತ ಮತ್ತು ಬಂಗಾಳಿ ಭಾಷೆಯಲ್ಲಿ ಕೆಲವು ಸ್ತೋತ್ರಗಳನ್ನು ರಚಿಸಿರುವುದಲ್ಲದೆ, ಬಂಗಾಳಿ ಭಾಷೆಯಲ್ಲಿ ಕೆಲವು ಗೀತೆಗಳನ್ನು ರಚಿಸಿದ್ದಾರೆ. ಅವರ **'ನಿಖಿಲ-ಭುವನ-ಜನ್ಮ'** (ಶಿವಸ್ತೋತ್ರ), **'ಕಾ ತ್ವಂ ಶಿವೇ ಶುಭಕರೇ'** (ದೇವೀಸ್ತುತಿ) ಮತ್ತು **'ಅಚಂಡಾಲಾಪ್ರತಿಹತರಯೋ'** (ಶ್ರೀರಾಮಕೃಷ್ಣರ ಸ್ತೋತ್ರ) ಎಂಬ ರಚನೆಗಳು ಸಾಹಿತ್ಯ ಸೊಬಗಿನ ಹಾಗೂ ಅಧ್ಯಾತ್ಮ ಮತ್ತು ಭಕ್ತಿಭಾವಗಳ, ಅಪೂರ್ವ ಸಮಾಗಮವಾಗಿವೆ. ಅವರ ಇನ್ನೊಂದು ಪ್ರಸಿದ್ಧ ಕೃತಿ **'ಓಂ ಹ್ರೀಂ ಋತಂ...'** ಎಂದು ಆರಂಭವಾಗುವ ಶ್ರೀರಾಮಕೃಷ್ಣರ ಮೇಲಿನ ರಚನೆಯನ್ನು ರಾಮಕೃಷ್ಣ ಸಂಘದ ಎಲ್ಲ ಕೇಂದ್ರಗಳಲ್ಲೂ ಸಂಜೆಯ ಆರತಿಯ ವೇಳೆ ಹಾಡುತ್ತಾರೆ.

ಅವರು ಬಂಗಾಳಿ ಭಾಷೆಯಲ್ಲಿ ರಚಿಸಿರುವ **'ಖಂಡನ-ಭವ-ಬಂಧನ...'** ಸ್ತೋತ್ರವು ಅತಿ ಪ್ರಸಿದ್ಧವಾದುದು. ಇದನ್ನು ರಾಮಕೃಷ್ಣ ಮಠದ ಎಲ್ಲಾ ಶಾಖಾಕೇಂದ್ರಗಳಲ್ಲೂ ಸಂಜೆ ಆರತಿಯ ವೇಳೆ ಹಾಡುತ್ತಾರೆ. ಈ ಸ್ತೋತ್ರವು ತನ್ನ ಗಮನಾರ್ಹವಾದ ಇಂಪಾದ ರಾಗಕ್ಕೆ ಪ್ರಸಿದ್ಧವಾಗಿದ್ದು ವೃಂದಗಾನಕ್ಕೆ ಆದರ್ಶಪ್ರಾಯವಾಗಿದೆ. ಇದನ್ನು ಪಕ್ಕವಾದ್ಯಗಳೊಡನೆ, ಮೃದಂಗ ಮತ್ತು ತಾಳಗಳೊಡನೆ ವೃಂದಗಾನವಾಗಿ ಭಕ್ತಸ್ತೋಮದ ಜೊತೆ ಹಾಡಿದರೆ ಅದು ಚೇತೋಹಾರಿಯೂ ಸ್ಫೂರ್ತಿದಾಯಕವೂ ಆಗುವುದು.

ಸ್ವಾಮೀಜಿಯವರು ಪರಾತ್ಪರ ಬ್ರಹ್ಮವನ್ನು ಕುರಿತು ರಚಿಸಿದ **'ಏಕರೂಪ ಅರೂಪ ನಾಮ'** ಎಂಬ ಹಾಡು ಮತ್ತು ಶಿವ ಮಹಾದೇವನನ್ನು ಕುರಿತು ರಚಿಸಿದ **'ತಾಥೈಯ್ಯ'** ಮತ್ತು **'ಹರ ಹರ ಭೂತನಾಥ'** ಎಂಬ ಹಾಡುಗಳು ಮಧುರವೂ, ಸುಶ್ರಾವ್ಯವೂ, ಲಯಬದ್ಧವೂ ಆಗಿವೆ.

ಹೀಗೆ ನಾವು ಸ್ವಾಮಿ ವಿವೇಕಾನಂದರು ಅಧ್ಯಾತ್ಮಗುರು, ಸಮಾಜಸುಧಾರಕ, ದೇಶಭಕ್ತ, ಪ್ರಕಾಂಡಪಂಡಿತ, ಪ್ರಚಂಡವಾಗ್ಮಿ, ಮತ್ತು ಶ್ರೇಷ್ಠ ಲೇಖಕರಾಗಿದ್ದಂತೆ ಶ್ರೇಷ್ಠ ಸಂಗೀತಗಾರರೂ ಆಗಿದ್ದರೆಂದು ನೋಡಬಹುದು.

ವಿವೇಕಾನಂದ ಘಟನಾವಳಿ

• ಸ್ವಾಮಿ ವಿವೇಕಾನಂದರನ್ನು ಕುರಿತು ಮಿ. ಫ್ರಾನ್ಸಿಸ್ ಲೆಗೆಟ್ ಹೀಗೆ ಹೇಳುತ್ತಾರೆ: "ನಾನು ಭೇಟಿಯಾದ ಸರ್ವಶ್ರೇಷ್ಠ ವ್ಯಕ್ತಿಯೇ ಅವರು." "ನೀವು ಹೀಗೆ ಹೇಳಲು ಕಾರಣವೇನು?" ಎಂದು ಅವರನ್ನು ಪ್ರಶ್ನಿಸಿದಾಗ ಅವರು ಹೀಗೆ ಹೇಳುತ್ತಾರೆ: "ಸ್ವಾಮೀಜಿಯವರಲ್ಲಿ common sense (ಸಾಮಾನ್ಯ ಜ್ಞಾನ) ವಿಶೇಷವಾಗಿತ್ತು. 'ಧರ್ಮ' ಎನ್ನುವುದು ಯಾವುದೇ ವಿಚಿತ್ರ ಸ್ಥಿತಿ ಅಲ್ಲ. ಅದು ವ್ಯಕ್ತಿಯೊಬ್ಬನ ಜೀವನದ ಉನ್ನತವಾದ ಆಯಾಮ. ಸ್ವಾಮೀಜಿಯವರು ಸದಾ ಪರಮಾನಂದದಲ್ಲಿ ಇರುತ್ತಿದ್ದರು. ಏಕೆಂದರೆ ತಾವು 'ದೈವತ್ವದ ಮೂರ್ತರೂಪ' ಎಂಬ ಅರಿವು ಅವರಿಗೆ ಸದಾಕಾಲವೂ ಜಾಗೃತವಾಗಿತ್ತು. ಈ ಅರಿವನ್ನು ಅವರು ಇತರರಿಗೂ ಧಾರಾಳವಾಗಿ ನೀಡಬಲ್ಲವರಾಗಿದ್ದರು."

• ಸ್ವಾಮೀಜಿಯ ಅನುಯಾಯಿಯಾದ ಮಿಸ್ ಮ್ಯಾಕ್ಲೌಡ್ ಸಾಮಾನ್ಯವಾಗಿ ಆರು ತಿಂಗಳು ಭಾರತದಲ್ಲಿ ಹಾಗೂ ಆರು ತಿಂಗಳು ಅಮೆರಿಕದಲ್ಲಿರುತ್ತಿದ್ದರು. ಬಹುಶಃ ೧೯೩೦ ರಲ್ಲಿ ಆಕೆ ಕೊಲ್ಕತಾಗೆ ಹೋಗುವ ದಾರಿಯಲ್ಲಿ ಮದ್ರಾಸಿಗೆ ಬಂದಿದ್ದರು. ಆಕೆ ಟ್ಯಾಕ್ಸಿಯಲ್ಲಿ ಬಂದರಿನಿಂದ ಮದ್ರಾಸ್ ಆಶ್ರಮಕ್ಕೆ ಬಂದಾಗ ಮಧ್ಯಾಹ್ನ ೧.೩೦ ಗಂಟೆಯಾಗಿತ್ತು. ದೇವಾಲಯ ಮುಚ್ಚಿತ್ತು. ಅಧ್ಯಕ್ಷರಾದ ಸ್ವಾಮಿ ಶರ್ವಾನಂದರ ಹತ್ತಿರ, "ನಾನು ಸ್ವಾಮೀಜಿಯವರ ಕೋಣೆಗೆ ಹೋಗಬೇಕಾಗಿದೆ" ಎಂದರು ಮ್ಯಾಕ್ಲೌಡ್. ಸ್ವಾಮಿ ಶರ್ವಾನಂದರು ವಿನಯದಿಂದ, "ಸ್ವಾಮೀಜಿ ಈಗ ವಿಶ್ರಾಂತಿ ಪಡೆಯುತ್ತಿದ್ದಾರೆ. ನೀವು ೪.೦೦ ಗಂಟೆಯವರೆಗೆ ಕಾಯಬೇಕಾಗುತ್ತದೆ" ಎಂದರು. "ಸ್ವಾಮೀಜಿಯವರಿಗೆ ವಿಶ್ರಾಂತಿ! ಇದೇನು ಮೂರ್ಖತನ! ಸ್ವಾಮೀಜಿಯವರು ಬದುಕಿದ್ದರೆ ನನ್ನನ್ನು ಬರಮಾಡಿಕೊಳ್ಳಲು ಬಂದರಿಗೇ ಬರುತ್ತಿದ್ದರು. ನೀವು ಹೇಳುತ್ತಿದ್ದೀರಿ, ಅವರು ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾರೆಂದು! ಕೋಣೆಯ ಬಾಗಿಲನ್ನು ತೆರೆಯಿರಿ" ಎಂದರು ಮ್ಯಾಕ್ಲೌಡ್. ಕಡೆಗೆ ಸ್ವಾಮಿ ಶರ್ವಾನಂದರು ಸ್ವಾಮೀಜಿಯವರ ಕೋಣೆಯ ಬಾಗಿಲನ್ನು ತೆರೆಯಲು ಪೂಜಾರಿಗೆ ಹೇಳಿದರು. ಸ್ವಾಮೀಜಿಯವರ ಭಾವಚಿತ್ರವನ್ನು ದಿಂಬಿನ ಮೇಲೆ ಕೂರಿಸಲಾಯಿತು. ಮ್ಯಾಕ್ಲೌಡ್ ಹೋಗಿ ಸ್ವಾಮೀಜಿಯವರ ಸನ್ನಿಧಿಯ ಹತ್ತಿರ ಕಣ್ಣುಮುಚ್ಚಿ ಕುಳಿತುಕೊಂಡರು. ಸ್ವಲ್ಪಹೊತ್ತಾದ ಮೇಲೆ ಮಠದಿಂದ ಬಂದರಿಗೆ ಮರಳಿದರು. ಪ್ರೇಮದ ಬಲ ಅಂಥದು! ಈ ಅಮೆರಿಕದ ಮಹಿಳೆಯ ಪ್ರಾಮಾಣಿಕ ಪ್ರೇಮವು ಸಾಂಪ್ರದಾಯಿಕ ಹಿಂದೂ ಆಶ್ರಮದ ಬಿಗಿ ನಿಯಮಗಳನ್ನೂ ಬದಲಾಯಿಸುವಂತೆ ಮಾಡಿತಲ್ಲ!

(ಸಂಗ್ರಹ: *ಸ್ವಾಮಿ ಚೇತನಾನಂದ;* ಅನುವಾದ: ಮಾತಾ ತ್ಯಾಗಮಯೀ)